ಈ) ಪ್ರಶ್ನೆ 'ಆ' ಗೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ವಿಷಯ : ಕಾವೇರಿ ಜಲಾನಯನ ಪ್ರದೇಶದ ವಿವಿಧ ಯೋಜನೆಗಳನ್ನು ಬೇಗ ಮುಗಿಸಲು ಒತ್ತಾಯ.

Q : 368

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) ಮತ್ತು ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಕಾವೇರಿ ಜಲಾನಯನ ಪ್ರದೇಶದ ವಿವಿಧ ಯೋಜನೆಗಳಿಗೆ ಎಷ್ಟು ಹಣ ಆಯವ್ಯಯದಲ್ಲಿ ಇಡಲಾಗಿತ್ತು ಹಾಗೂ ಎಷ್ಟು ಹಣ ಖರ್ಚಾಗಿದೆ;

ಆ) ಈ ಎಲ್ಲಾ ಯೋಜನೆಗಳನ್ನು ಮುಗಿಸಲು ಬೇಕಾಗಿರುವ ಒಟ್ಟು ಹಣ ಎಷ್ಟು ಹಾಗೂ ಅವುಗಳನ್ನು ಯಾವಾಗ ಮುಗಿಸಲಾಗುವುದು;

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ)

ಅನುದಾನ		ಖರ್ಚು (ಕೋಟಿ ರೂ. ಗಳಲ್ಲಿ)
1989-90	119.86	92.11
1990-91	124.44	103.70
1991-92	150.32	147.70
ಒಟ್ಟು	394.62	343.51

ಆ) ಪ್ರಸ್ತುತ ದರದ ಪ್ರಕಾರ 1700 ಕೋಟಿ ರೂ.ಗಳು. ಹಣದ ಲಭ್ಯತೆಯನ್ನು ಅವಲಂಬಿಸಿ, ಈ ಯೋಜನೆಗಳನ್ನು ಎಂಟನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಪೂರ್ಣಗೊಳಿಸುವ ಉದ್ದೇಶವಿದೆ.

ವಿಷಯ : ಮಂಗಳೂರು ನಗರದ ವಿದ್ಯುತ್ ಪೂರೈಕೆಯಲ್ಲಿನ ಕೊರತೆಯ ನಿವಾರಣೆ.

Q : 783

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ನಗರದ ವಿದ್ಯುತ್ ಸಮಸ್ಯೆಯನ್ನು ಪರಿಹರಿಸಲು ಹೆಚ್ಚುವರಿ ಸಬ್‌ಸ್ಟೇಷನ್‌ಗಳನ್ನು ಶೀಘ್ರವೇ ನಿರ್ಮಿಸಲಾಗುವುದೇ?

ಆ) ಅದೇ ರೀತಿ ಉಳ್ಳಾಲ ಕ್ಷೇತ್ರದ ವಿದ್ಯುತ್ ತೊಂದರೆ ನೀಗಿಸಲು ಹೆಚ್ಚುವರಿ ಒಂದು ಸಬ್ ಸ್ಟೇಷನ್ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು?

ಇ) ಹಳೆಯ ಉಪಕರಣಗಳನ್ನು ಬದಲಾಯಿಸದೆ ಇರುವುದರಿಂದಲೂ ಹಾಳಾದ ಮತ್ತು ಓವರ್‌ಲೋಡ್ ಆಗಿರುವ ಟ್ರಾನ್ಸ್‌ಫಾರ್ಮರ್‌ಗಳ ದೆಸೆಯಿಂದಲೂ ವಿದ್ಯುತ್ ವಿತರಣೆ ಸಮರ್ಪಕವಾಗದೇ ಇರುವುದೇ ಕಾರಣವಲ್ಲವೇ?

ಈ) ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ವಿದ್ಯುತ್ ವಿತರಣೆಯನ್ನು ಸರಿಪಡಿಸಲು ಆಗುವುದೇ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಮಂಗಳೂರು ನಗರದ ವಿದ್ಯುತ್ ಸಮಸ್ಯೆಯನ್ನು ಪರಿಹರಿಸಲು ಮಂಗಳೂರು ನಗರದಲ್ಲಿರುವ ಮಂಗಳಾ ಸ್ಟೇಡಿಯಂ ಸಮೀಪ ನೆಹರೂ ಮೈದಾನದ ಹತ್ತಿರ ಮತ್ತು ಕನಕನಾಡಿಯಲ್ಲಿ 33:11 ಕೆವಿ ಉಪ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಗಳಿಗೆ ಮಂಡಳಿಯು ಅಂಗೀಕಾರ ನೀಡಿದೆ. ಮಂಡಳಿಯ ಆರ್ಥಿಕ ಸಂಪನ್ಮೂಲವನ್ನು ಗಮನದಲ್ಲಿಟ್ಟುಕೊಂಡು ಈ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಆ) ಸದ್ಯಕ್ಕೆ ಉಳ್ಳಾಲದಲ್ಲಿ ಹೆಚ್ಚುವರಿ ಒಂದು ಸಬ್ ಸ್ಟೇಷನ್ ನಿರ್ಮಿಸುವ ಪ್ರಸ್ತಾವನೆ ಮಂಡಳಿಯ ಮುಂದಿಲ್ಲ.

ಇ) ಮಂಗಳೂರು ನಗರದ ಸುತ್ತಮುತ್ತ ಇರುವ ವಿದ್ಯುತ್ ಉಪಕೇಂದ್ರಗಳ ಸಾಮರ್ಥ್ಯವನ್ನು ಅಧಿಕಗೊಳಿಸಲು ಹಾಗೂ ಹಾಳಾದ ಹಳೆ ಉಪಕರಣಗಳನ್ನು ಬದಲಾಯಿಸಲು ಮಂಡಳಿಯು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ವಿದ್ಯುತ್ ವಿತರಣೆಯನ್ನು ಸರಿಪಡಿಸಲಾಗುವುದು.

ವಿಷಯ : ರಾಜ್ಯದಲ್ಲಿ ಲೋಕೋಪಯೋಗಿ ರಸ್ತೆಗಳಿಗೆ ಡಾಂಬರ್.

Q : 62

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1989ನೇ ಏಪ್ರಿಲ್‌ನಿಂದ ಈವರೆಗೆ ಲೋಕೋಪಯೋಗಿ ಇಲಾಖೆ ವತಿಯಿಂದ ಡಾಂಬರ್ ಹಾಕಿರುವ ರಸ್ತೆಯ ಉದ್ದವೆಷ್ಟು; (ಪ್ರತಿ ವರ್ಷದ ಉದ್ದ ಅಳತೆ ಅಂಕಿ ಅಂಶಗಳ ವಿವರ ನೀಡುವುದು)

ಆ) ದಕ್ಷಿಣ ಕನ್ನಡದಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 1989ನೇ ಏಪ್ರಿಲ್‌ನಿಂದ ಪ್ರತಿ ವರ್ಷ ಎಷ್ಟು ಕಿಲೋಮೀಟರ್ ಡಾಂಬರು ಹಾಕಲಾಗಿದೆ; ಹಾಗೂ ಇನ್ನು ಬಾಕಿ ಉಳಿದ ಕಿಲೋ ಮೀಟರ್‌ಗಳೆಷ್ಟು ; (ಪ್ರತಿ ವಿಧಾನ ಸಭಾ ಕ್ಷೇತ್ರದ ವಿವರ ನೀಡುವುದು)